check

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	446
2	ಸದಸ್ಯರ ಹೆಸರು	ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	11.03.2020
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಮಅ/441/ಗ್ರಾಪಂಅ/2016 (ಭಾಗ-3) ದಿನಾಂಕ: 28.10.2016 ರ ಪ್ರಕಾರ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮ ಠಾಣ ಗಡಿ ತುಂಬಾ ಹಿಂದೆ ನಿಗದಿಪಡಿಸಿದ್ದು, ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ ಗ್ರಾಮಠಾಣವನ್ನು ಪುನರ್ ನಿಗದಿಪಡಿಸಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು, ಹೋಬಳಿವಾರು ಗ್ರಾಮಗಳ ಮಾಹಿತಿ ನೀಡುವುದು)	ಕರ್ನಾಟಕ ಭೂಕಂದಾಯ ಅಧಿನಿಯಮ, 1964 ರನ್ವಯ ಮರು ಭೂಮಾಪನ ಕಾರ್ಯ ಕೈಗೊಂಡಾಗ ವಿಸ್ತರಿತ ಜನವಸತಿ ಪ್ರದೇಶದ ಗಡಿಗಳನ್ನು ಗ್ರಾಮಠಾಣ ವ್ಯಾಪ್ತಿಯೆಂದು ನಿಗಧಿಪಡಿಸುವ ಕ್ರಮವಿರುತ್ತದೆ. ಸರ್ಕಾರವು ರಾಜ್ಯದಲ್ಲಿ ಮರು ಭೂಮಾಪನ ಕಾರ್ಯ ಕೈಗೊಳ್ಳಲು ತೀರ್ಮಾನಿಸಿದ್ದು, ಸರ್ವೆ ಆಫ್ ಇಂಡಿಯಾದವರ ಸಹಭಾಗಿತ್ವದಲ್ಲಿ ಡ್ರೋಣ್ ಆಧಾರಿತ ಮರು ಭೂಮಾಪನ ಕೈಗೊಳ್ಳಲು ಮೊದಲ ಹಂತದಲ್ಲಿ 5 ಜಿಲ್ಲೆಗಳು ಹಾಗೂ ಎರಡನೇ ಹಂತದಲ್ಲಿ 8 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಅಳತೆಗೆ ಸಿದ್ಧತಾ ಕಾರ್ಯ ಪ್ರಾರಂಭಿಸಿದೆ. ಈ ನಡುವೆ ಕೆಲವು ಗ್ರಾಮ ಪಂಚಾಯತಿಗಳಿಂದ ಬಂದ ಕೋರಿಕೆಗಳನ್ನು ಅನುಸರಿಸಿ ಸರ್ಕಾರವು ಸುತ್ತೋಲೆ ಸಂಖ್ಯೆ: ಗ್ರಾಮಅ/441/ಗ್ರಾಪಂಅ/2016(ಭಾಗ-3), ದಿನಾಂಕ: 28.10.2016 ನ್ನು ಹೊರಡಿಸಿರುತ್ತದೆ. ಈ ಸುತ್ತೋಲೆಯ ಪ್ರಕಾರ ಮರು ಭೂಮಾಪನ ಪೂರ್ವದಲ್ಲಿಯೇ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ವಿಸ್ತರಿತ ಜನವಸತಿ ಪ್ರದೇಶವನ್ನು ಗ್ರಾಮಠಾಣ ವ್ಯಾಪ್ತಿಯಲ್ಲಿ ತರುವ ಬಗ್ಗೆ ಮಾರ್ಗಸೂಚಿಯನ್ನು ರೂಪಿಸಿದೆ. ರಾಜ್ಯದಲ್ಲಿ ಸುಮಾರು 30000ಕ್ಕೂ ಅಧಿಕ ಕಂದಾಯ ಗ್ರಾಮಗಳಿದ್ದು, ಬಹುತೇಕ ಗ್ರಾಮಗಳಲ್ಲಿ ಮೂಲ ಗ್ರಾಮ ಠಾಣದಿಂದ ಹೊರಗೆ ಜನವಸತಿಗಳು ಬಂದಿರುತ್ತವೆ. ಸುತ್ತೋಲೆ ಮಾರ್ಗಸೂಚಿಯಂತೆ ಈ ಎಲ್ಲಾ ಗ್ರಾಮಗಳ ವಿಸ್ತರಿತ ವಸತಿ ಪ್ರದೇಶವನ್ನು ಅಳತೆ ಮಾಡಿ ಗ್ರಾಮಠಾಣದ ವ್ಯಾಪ್ತಿ ನಿಗಧಿಪಡಿಸಬೇಕಾಗಿರುತ್ತದೆ. ವಿಸ್ತರಿತ ಜನವಸತಿ ಪ್ರದೇಶಗಳಲ್ಲಿ ನಿಯಮಬದ್ಧವಾಗಿ ಹಾಗೂ ನಿಯಮಬಾಹಿರವಾಗಿ ಬೆಳವಣಿಗೆ ಹೊಂದಿರುವ ಪ್ರದೇಶಗಳು ಒಳಗೊಂಡಿರುತ್ತವೆ. ಹೀಗಾಗಿ, ಈ ಕಾರ್ಯವನ್ನು ಕೈಗೊಳ್ಳುವಾಗ ಈ ಎರಡೂ ಪ್ರದೇಶಗಳನ್ನು ಪ್ರತ್ಯೇಕಿಸಿ ಅಥವಾ ಒಳಪಡಿಸಿ, ಗಡಿ ಗುರ್ತಿಸುವ ಬಗ್ಗೆ ಸಂಬಂಧಿತ ಇಲಾಖೆಗಳೊಂದಿಗೆ ವಿಸ್ತೃತ ಸಮಾಲೋಚನೆ ನಡೆಸಿ ಸೂಕ್ತ ನಿಲುವು ತೆಗೆದುಕೊಂಡು ಮುಂದಿನ ಕ್ರಮ ಜರುಗಿಸಲಾಗುವುದು.
ಆ)	ಮೇಲ್ಕಂಡ ಸುತ್ತೋಲೆ ಪ್ರಕಾರ ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮ ಠಾಣಕ್ಕೆ ಹೊಂದಿಕೊಂಡಿರುವ ಗ್ರಾಮಗಳ ಬೆಳವಣಿಗೆಯಾಗಿದ್ದು, ಅಭಿವೃದ್ಧಿಗೊಂಡ ಈ ಪ್ರದೇಶಗಳನ್ನು ಗ್ರಾಮ ಠಾಣ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಗ್ರಾಮಠಾಣಗಳ ವಿಸ್ತರಣೆ ಕಾರ್ಯವನ್ನು ಪೂರ್ಣಗೊಳಿಸಲು ಯಾವ ಕಾಲಮಿತಿಯನ್ನು ನಿಗದಿಪಡಿಸಿದೆ;	
ಇ)	ಸದರಿ ಕಾರ್ಯವು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕಾರ್ಯವನ್ನು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)	

ಸಂಖ್ಯೆ: ಕಂಇ 25 ಎಸ್ಎಸ್ಸಿ 2020

(ಆರ್. ಅಶೋಕ)
ಕಂದಾಯ ಸಚಿವರು